Improving Lives

# CHAITANYA Update

August , 2014

As we complete 5 years of existence, we are launching our first regular Chaitanya newsletter or update. We plan to have our update once a quarter. The update will cover the main happenings at the company. As we expand our activities in the community service space, we hope that the update will also be a good platform to highlight our community activities.

## ICRA Grading of M2 to Chaitanya

ICRA has assigned a M2 grading to Chaitanya. ICRA's grading scale is from M1 to M5 with M1 being the highest. The M2 grade indicates that the company's ability to manage its microfinance activities in a sustainable manner is high.

## Diversification of Funding Through Issuance of NCD's

For the first time, we issued rated and listed non convertible debentures (NCD's) through private placement. The total amount raised was 12.5 crores through two NCD issuances. Hinduja Leyland Finance Limited and Ratnakar Bank were the investors. IFMR Capital was the arranger and structurer of the deal.

## Our Community Activities

We plan to put sustained focus on community activities from this year. An important criteria we have kept for our community activities is that it should reach a sizeable proportion of people, comparable to the number of microcredit borrowers we serve. We have kept this number at 20 percent of microcredit borrowers. This criteria automatically limits the kind of social activities we will do. But we believe it will give us better focus and get us to integrate any social activity we do with our core activity of giving microcredit loans.

Providing Livestock Services is an area where we are already doing community work, which we plan to expand further this year. With over 20% of our borrowers taking loans for purchase of livestock, it is a sizeable number to focus our community service activities. In the livestock area, we do three main activities. One is to provide insurance to milch animals funded by us. Two is to increase awareness in the community on livestock care and diseases through video shows and awareness camps. Three is conduct veterinary camps. Till date we have conducted 5 cattle health camps and treated 1000 cattle in partnership with the government veterinary department.

### Operational Performance- 31st July 14

| | |
|---|---|
| Number of Districts | 10 |
| Number of Branches | 29 |
| Number of Villages | 1913 |
| Number of Active Clients | 54608 |
| Total Portfolio (Rs.) | 64.5 Cr |
| Number of JLG Overdue accounts | 18 |
| Total Employees | 255 |



### Livestock Activities -April to July 14

| | |
|---|---|
| No. of Livestock Insurances Given | 367 |
| No. of awareness video shows | 9 |
| No. of participants- Video shows | 375 |

## Introduction of Toll Free Number for Borrowers

For the convenience of our borrowers, we have introduced a toll free number from August 2014. Borrowers can contact the toll free number for any grievance that they have.

## Awards and Recognition

Chaitanya's Livestock Insurance Initiative given the order of merit at the Skoch Financial Inclusion & Deepening Award 2014.

Anand Rao, Managing Director of the company was elected to the board of Microfinance Institution Network (MFIN)

## Chaitanya's Annual Meet

The annual meet gets all the employees and their families to come together for a day of cultural programs and sports activities. This year, the annual event was conducted at Chitradurga on 23rd May 2014.



**Contact Us:**
**Shilpa, Email: shilpa@chaitanyaindia.in**
**#98, 3rd Floor, Sirsi Circle, Mysore road, Chamarajpet, Bangalore-560018**
**Tel No: 080 26750010, 080 26756767, www.chaitanyaindia.in**

ಜೀವನ ಸುಧಾರಣೆ

# ಚೈತನ್ಯ ಸಮಾಚಾರ

ಆಗಸ್ಟ್ , 2014

ಚೈತನ್ಯ ಅಸ್ತಿತ್ವಕ್ಕೆ ಬಂದು ಐದು ವರ್ಷಗಳಾದವು. ಈ ಸಂದರ್ಭದಲ್ಲಿ ನಾವು ಮೊದಲ ಸುದ್ದಿಪತ್ರಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಸಂಸ್ಥೆಯ ಕುರಿತು ಮಾಹಿತಿಪತ್ರ ಎಂದೂ ಹೇಳಬಹುದು. ಪ್ರತಿ ಮೂರು ತಿಂಗಳಿಗೊಮ್ಮೆ ಈ ಪತ್ರಿಕೆಯನ್ನು ಬಿಡುಗಡೆ ಮಾಡಲು ನಾವು ಉದ್ದೇಶಿಸಿದ್ದೇವೆ. ಕಂಪೆನಿಯಲ್ಲಿ ನಡೆಯುವ ಪ್ರಮುಖ ಆಗುಹೋಗುಗಳನ್ನು ಇದು ಒಳಗೊಂಡಿರುತ್ತದೆ. ಸಮುದಾಯ ಸೇವೆಯಲ್ಲಿ ನಾವು ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುತ್ತಿದ್ದಂತೆ ಈ ಮಾಹಿತಿ ಪತ್ರ ನಮ್ಮ ಸಮುದಾಯ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲಲು ಉತ್ತಮ ವೇದಿಕೆ ಒದಗಿಸಲಿದೆ.

## ಚೈತನ್ಯಕ್ಕೆ ಐಸಿಆರ್‌ಎಯಿಂದ ಎಂ2 ಗ್ರೇಡಿಂಗ್

ಐಸಿಆರ್‌ಎ ಸಂಸ್ಥೆ ಚೈತನ್ಯಕ್ಕೆ ಎಂ2 ದರ್ಜೆಯನ್ನು ನೀಡಿದೆ. ಐಸಿಆರ್‌ಎ ಎಂ1ರಿಂದ ಎಂ5ವರೆಗಿನ ಗ್ರೇಡಿಂಗ್‌ಗಳನ್ನು ಸಂಸ್ಥೆಗಳಿಗೆ ನೀಡುತ್ತಿದೆ. ಇದರಲ್ಲಿ ಎಂ1 ಅಂದರೆ ಅತ್ಯುತ್ತಮ ಎಂದರ್ಥ. ಎಂ2 ಗ್ರೇಡಿಂಗ್ ಅಂದರೆ ಚೈತನ್ಯ ಸುಸ್ಥಿರವಾಗಿ ಸಣ್ಣ ಹಣಕಾಸು ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ ಎನ್ನುವುದಕ್ಕೆ ದ್ಯೋತಕ.

ಆಡಳಿತಾತ್ಮಕ ಸಾಧನೆಗಳು– ಜುಲೈ 31, 2014

| | |
|---|---|
| ಜಿಲ್ಲೆಗಳ ಸಂಖ್ಯೆ | 10 |
| ಶಾಖೆಗಳ ಸಂಖ್ಯೆ | 29 |
| ಗ್ರಾಮಗಳ ಸಂಖ್ಯೆ | 1913 |
| ಸಕ್ರಿಯ ಗ್ರಾಹಕರ ಸಂಖ್ಯೆ | 54608 |
| ಒಟ್ಟು ಪೋರ್ಟ್‌ಫೋಲಿಯೋ (ರೂ.ಗಳಲ್ಲಿ) | 64.5 ಕೋ. |
| ಜೆಎಲ್‌ಜಿ ಓವರ್‌ಡ್ಯೂ ಅಕೌಂಟ್‌ಗಳ ಸಂಖ್ಯೆ | 18 |
| ಒಟ್ಟು ಸಿಬ್ಬಂದಿ | 255 |

## ಎನ್‌ಸಿಡಿಗಳನ್ನು ವಿತರಿಸುವ ಮೂಲಕ ನೆರವಿನ ಸ್ವರೂಪದಲ್ಲಿ ವಿಭಿನ್ನತೆ ತರುವುದು

ಮೊದಲ ಬಾರಿಗೆ ನಾವು ರೇಟಿಂಗ್ ಹೊಂದಿರುವ ಮತ್ತು ಲಿಸ್ಟಿಂಗ್ ಆಗಿರುವ ಪರಿವರ್ತನೆ ಆಗದ ಡಿಬೆಂಚರುಗಳನ್ನು (ಎನ್‌ಸಿಡಿ) ಖಾಸಗಿ ಪ್ಲೇಸ್‌ಮೆಂಟ್‌ಗಳ ಮೂಲಕ ಬಿಡುಗಡೆ ಮಾಡಿದ್ದೇವೆ. ಎರಡು ಎನ್‌ಸಿಡಿಗಳನ್ನು ಬಿಡುಗಡೆ ಮಾಡುವ ಮೂಲಕ ನಾವು 12.5 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದ್ದೇವೆ. ಹಿಂದುಜಾ ಲೇಲ್ಯಾಂಡ್ ಫೈನಾನ್ಸ್ ಲಿಮಿಟೆಡ್ ಮತ್ತು ರತ್ನಾಕರ್ ಬ್ಯಾಂಕ್ ಇವು ಹೂಡಿಕೆದಾರರು. ಐಎಫ್‌ಎಂಆರ್ ಕ್ಯಾಪಿಟಲ್ ಈ ಒಪ್ಪಂದದ ವ್ಯವಸ್ಥೆ ಮಾಡಿ ಸ್ವರೂಪವನ್ನು ಸಿದ್ಧಗೊಳಿಸಿದರು.



ಪಶುಸಂಗೋಪನೆ ಚಟುವಟಿಕೆಗಳು, ಏಪ್ರಿಲ್‌ನಿಂದ ಜುಲೈ, 2014

| | |
|---|---|
| ಒದಗಿಸಲಾದ ಒಟ್ಟು ಪಶು ವಿಮೆಗಳ ಸಂಖ್ಯೆ | 367 |
| ಅರಿವು ಮೂಡಿಸುವ ವೀಡಿಯೋ ಪ್ರದರ್ಶನಗಳು | 9 |
| ವೀಡಿಯೋ ಪ್ರದರ್ಶನಗಳಲ್ಲಿ ಪಾಲ್ಗೊಂಡವರ ಸಂಖ್ಯೆ | 375 |

## ನಮ್ಮ ಸಮುದಾಯ ಚಟುವಟಿಕೆಗಳು

ಈ ವರ್ಷ ಸಮುದಾಯ ಚಟುವಟಿಕೆಗಳತ್ತ ನಿರಂತರವಾಗಿ ಗಮನ ಹರಿಸಲು ನಾವು ಯೋಜಿಸಿದ್ದೇವೆ. ನಮ್ಮ ಸಣ್ಣ ಸಾಲಗಳ ಗ್ರಾಹಕರಿಗೆ ಹೋಲಿಸಿದರೆ ಸಾಕಷ್ಟು ಸಂಖ್ಯೆಯಲ್ಲಿ ಜನರನ್ನು ತಲುಪಲು ಸಾಧ್ಯವಾಗುವಂತೆ ನಮ್ಮ ಸಮುದಾಯ ಚಟುವಟಿಕೆಗಳನ್ನು ರೂಪಿಸಬೇಕು. ಸಣ್ಣ ಸಾಲಗಳ ಗ್ರಾಹಕರ ಕನಿಷ್ಠ ಶೇ 20ರಷ್ಟು ಇವರ ಸಂಖ್ಯೆ ಇರಬೇಕೆಂಬ ಗುರಿಯನ್ನು ನಾವಿಟ್ಟುಕೊಂಡಿದ್ದೇವೆ. ಇದರಿಂದಾಗಿ ನಮ್ಮ ಸಮುದಾಯ ಚಟುವಟಿಕೆಗಳ ಸ್ವರೂಪ ಹೇಗಿರಬೇಕೆನ್ನುವುದನ್ನು ತಾನೇ ತಾನಾಗಿ ಗುರುತಿಸಿಕೊಳ್ಳುವುದು ಸಾಧ್ಯವಾಗಲಿದೆ. ನಮ್ಮ ಗಮನ ಯಾವುದರತ್ತ ಇರಬೇಕು ಎನ್ನುವುದನ್ನೂ ಇದು ನಿರ್ಧರಿಸುತ್ತದೆ. ಜೊತೆಗೆ ನಮ್ಮ ಪ್ರಮುಖ ಚಟುವಟಿಕೆಯಾದ ಸಣ್ಣ ಸಾಲ ವಿತರಣೆಯೊಂದಿಗೆ ಯಾವುದೇ ಸಮುದಾಯ ಚಟುವಟಿಕೆಯನ್ನು ಸಂಯೋಜಿಸಲೂ ಇದರಿಂದಾಗಿ ಸಾಧ್ಯವಾಗುತ್ತದೆ.

ಜನರಿಗೆ ಪಶುಸಂಗೋಪನೆ ಸೇವೆಗಳನ್ನು ನಾವು ಈಗಾಗಲೇ ಒದಗಿಸುತ್ತಿದ್ದು ಇದು ಸಮುದಾಯ ಚಟುವಟಿಕೆಯ ಒಂದು ಭಾಗವಾಗಿದೆ. ಇದನ್ನು ಈ ವರ್ಷ ನಾವು ವಿಸ್ತರಿಸಬಹುದು. ನಮ್ಮ ಗ್ರಾಹಕರಲ್ಲಿ ಶೇ 20ರಷ್ಟು ಮಂದಿ ಪಶು ಸಂಗೋಪನೆಗಾಗಿ ಸಾಲ ಪಡೆಯುತ್ತಿದ್ದಾರೆ. ಇದು ಸಾಕಷ್ಟು ಪ್ರಮಾಣವೆಂದೇ ಭಾವಿಸಬಹುದು. ಪಶು ಸಂಗೋಪನೆ ಕ್ಷೇತ್ರದಲ್ಲಿ ನಾವು ಮೂರು ಪ್ರಮುಖ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದೇವೆ. ಮೊದಲನೆಯದು, ನಮ್ಮ ಸಾಲದ ಮೂಲಕ ಖರೀದಿಸುವ ಹಾಲು ಕೊಡುವ ಪಶುಗಳಿಗೆ ನಾವು ವಿಮೆಯನ್ನು ಒದಗಿಸುತ್ತಿದ್ದೇವೆ. ಎರಡನೆಯದು ವೀಡಿಯೋ ಪ್ರದರ್ಶನ ಮತ್ತು ಅರಿವು ಶಿಬಿರಗಳ ಮೂಲಕ ಪಶುಗಳ ಆರೈಕೆ ಮತ್ತು ಕಾಯಿಲೆಗಳ ಕುರಿತು ಅರಿವು ಮೂಡಿಸುತ್ತಿದ್ದೇವೆ.
ಮೂರನೆಯದು ಪಶುಚಿಕಿತ್ಸಾ ಶಿಬಿರಗಳನ್ನು ನಾವು ನಡೆಸುತ್ತಿದ್ದೇವೆ. ಇದುವರೆಗೆ ನಾವು ಸರಕಾರದ ಪಶು ಸಂಗೋಪನಾ ಇಲಾಖೆಯೊಂದಿಗೆ ಸೇರಿ ಹಸುಗಳಿಗಾಗಿ ಐದು ಶಿಬಿರಗಳನ್ನು ನಡೆಸಿದ್ದು, ಸುಮಾರು ಒಂದು ಸಾವಿರ ಹಸುಗಳಿಗೆ ಆರೈಕೆ ಮಾಡಿದ್ದೇವೆ.

## ಗ್ರಾಹಕರಿಗಾಗಿ ಉಚಿತ ಕರೆಗಳ ಸಂಖ್ಯೆ

ಗ್ರಾಹಕರ ಅನುಕೂಲಕ್ಕಾಗಿ ನಾವು 2014ರ ಆಗಸ್ಟ್‌ನಿಂದ ಉಚಿತ ಕರೆಗಳನ್ನು ಮಾಡಲು ಸಾಧ್ಯವಾಗುವಂಥ ಸೌಲಭ್ಯವನ್ನು ಆರಂಭಿಸಿದ್ದೇವೆ. ಗ್ರಾಹಕರು ತಮ್ಮ ಯಾವುದೇ ಸಮಸ್ಯೆಗಳಿಗೆ ಈ ಉಚಿತ ಕರೆಯ ಸಂಖ್ಯೆಗೆ ಕರೆ ಮಾಡಬಹುದು.

## ಪ್ರಶಸ್ತಿಗಳು ಮತ್ತು ಮಾನ್ಯತೆ

ಚೈತನ್ಯದ ಪಶು ವಿಮೆ ಯೋಜನೆಗೆ 2014ರ ಸ್ಕಾಚ್ ಫೈನಾನ್ಷಿಯಲ್ ಇಂಕ್ಲುಷನ್ ಆಂಡ್ ಡೀಪನಿಂಗ್ ಪ್ರಶಸ್ತಿಯ ಆರ್ಡರ್ ಆಫ್ ಮೆರಿಟ್ ಲಭಿಸಿದೆ.
ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕರಾದ ಆನಂದ ರಾವ್ ಅವರು ಮೈಕ್ರೋಫೈನಾನ್ಸ್ ಇನ್‌ಸ್ಟಿಟ್ಯೂಷನ್ ನೆಟ್‌ವರ್ಕ್ (ಎಂಎಫ್‌ಐಎನ್)ನ ಆಡಳಿತ ಮಂಡಳಿಗೆ ಆಯ್ಕೆ ಆಗಿದ್ದಾರೆ.

## ಚೈತನ್ಯದ ವಾರ್ಷಿಕ ಸಭೆ

ಚೈತನ್ಯದ ವಾರ್ಷಿಕ ಸಭೆಯಲ್ಲಿ ಸಂಸ್ಥೆಯ ಎಲ್ಲ ಸಿಬ್ಬಂದಿ ಮತ್ತು ಕುಟುಂಬದ ಸದಸ್ಯರು ಒಗ್ಗೂಡಲು ಅವಕಾಶ ಕಲ್ಪಿಸುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ವರ್ಷ ವಾರ್ಷಿಕ ಸಭೆ 2014ರ ಮೇ 23ರಂದು ಚಿತ್ರದುರ್ಗದಲ್ಲಿ ನಡೆಯಿತು.



**ನಮ್ಮ ಸಂಪರ್ಕ ವಿವರಗಳು**

ಶಿಲ್ಪಾ, ಇಮೇಲ್: shilpa@chaitanyaindia.in
ನಂ. 98, ಮೂರನೇ ಮಹಡಿ, ಸಿರ್ಸಿ ಸರ್ಕಲ್, ಮೈಸೂರು ರಸ್ತೆ, ಚಾಮರಾಜಪೇಟೆ, ಬೆಂಗಳೂರು 560018.
ದೂರವಾಣಿ: 080 2675 0010, 080 2675 6767 www.chaitanyaindia.in